**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.**

ಸಂಖ್ಯೆ:ಕಪಂರಾಆ/ಅಭಿವೃದ್ಧಿ/219/2023 ದಿನಾಂಕ:08.09.2023

## ಸಮಾಲೋಚಕರ ನೇಮಕಾತಿ ಮರು ಪ್ರಕಟಣೆ

ಮಕ್ಕಳಿಗೆ ಸ್ಪಂದಿಸುವ ಸ್ಥಳೀಯ ಆಡಳಿತ ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಅರ್ಹ ಮತ್ತು ಅನುಭವಿ ಸಮಾಲೋಚಕರನ್ನು ಈ ಕೆಳಕಂಡ ಹುದ್ದೆಗೆ ಅರ್ಜಿ ಅಹ್ವಾನಿಸಲಾಗಿದೆ.

1. ಸಮಾಲೋಚಕರು (Child Right Expert)

ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ಸರ್ಕಾರ (ಗ್ರಾಮ ಪಂಚಾಯತಿಗಳು) ವು ಮಕ್ಕಳಿಗೆ ಸ್ಪಂದಿಸುವ ಸಂಸ್ಥೆಯಾಗುವುದರ ಮೂಲಕ ಗ್ರಾಮೀಣ ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಮಕ್ಕಳ ಯೋಗಕ್ಷೇಮವನ್ನು ವೃದ್ಧಿಸುವ ಸಲುವಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇಲ್ಲಿ ಯುನಿಸೆಫ್ ಅನುದಾನದೊಂದಿಗೆ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ಈ ಹುದ್ದೆಗೆ ಕನ್ನಡ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ವಿವಿಧ ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯತಿಗಳಿಗೆ ವ್ಯಾಪಕವಾಗಿ ಪ್ರವಾಸ ಮಾಡುವುದು ಅಗತ್ಯವಿರುತ್ತದೆ. ಈಗಾಗಲೇ ಮೂರು ಬಾರಿ ಮೇಲ್ಕಂಡ ಹುದ್ದೆಗೆ ಪ್ರಕಟಣೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ನಡೆಸಲಾಗಿದ್ದು, ಸೂಕ್ತ ಅಭ್ಯರ್ಥಿಯು ಆಯ್ಕೆಯಾಗದ ಕಾರಣ, ಪುನಃ 4 ನೇ ಬಾರಿ ನೇರವಾಗಿ ಆಯುಕ್ತಾಲಯದ ವೆಬ್ ಸೈಟ್ ನಲ್ಲಿ ಮಾತ್ರ ಪ್ರಕಟಣೆ ಹೊರಡಿಸಿ, ನೇಮಕಾತಿಯನ್ನು ನಡೆಸಲು ತೀರ್ಮಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು https://prcrdpr.karnataka.gov.in/ ಲಿಂಕ್‌ನಲ್ಲಿ ಆಹ್ವಾನಿಸಲಾದ ಹುದ್ದೆಗೆ ವಿವರಣೆಯನ್ನು (Job Description) ಗಮನಿಸುವುದು. 16ನೇ ಸೆಪ್ಟಂಬರ್ 2023 ರಂದು ಸಂಜೆ 5.30 ರೊಳಗಾಗಿ ಅರ್ಜಿಗಳನ್ನು ಎಲ್ಲಾ ಲಗತ್ತುಗಳೊಂದಿಗೆ ಇ-ಮೇಲ್ ವಿಳಾಸ prc.recruitment@ka.gov.in ಕ್ಕೆ ಸಲ್ಲಿಸುವುದು ಹಾಗೂ ಈ ಹಿಂದೆ ಈ ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸಿದಲ್ಲಿ, ಸದರಿ ಅರ್ಜಿಯನ್ನು ಪರಿಗಣಿಸುವುದಿಲ್ಲ.

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.